# PRESS CLIPPINGS

**EQUATOR**

Full Circle MPR Consulting

Region:

Client : Bangalore Nano 2008 — Lead : Nano to fulfill people's requirement

Publication : Udaya Vani — Date : 14th Dec 2008

Section : Pg - 1 and 5 — Method : Conference

# ಶ್ರೀಸಾಮಾನ್ಯನ ಕಲ್ಯಾಣಕ್ಕೆ 'ನ್ಯಾನೋ'

## ಉಪರಾಷ್ಟ್ರಪತಿ ಹಮೀದ್ ಅನ್ಸಾರಿ ಕರೆ

ಬೆಂಗಳೂರು, ಡಿ. 13: ನ್ಯಾನೋ ಕ್ಷೇತ್ರದ ಸಂಶೋಧನೆ, ಸಾಧನೆಗಳು ಶ್ರೀಸಾಮಾನ್ಯನ ಕಲ್ಯಾಣವನ್ನು ಗುರಿಯಾಗಿಟ್ಟುಕೊಳ್ಳಲಿ ಹಾಗೂ ನ್ಯಾನೋ ಸಂಶೋಧನೆ ಸ್ವಯಂ ನೀತಿ ಸಂಹಿತೆ ರೂಢಿಸಿಕೊಳ್ಳಲಿ ಎಂದು ಉಪ ರಾಷ್ಟ್ರಪತಿ ಹಮೀದ್ ಅನ್ಸಾರಿ ಕರೆ ನೀಡಿದರು.

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಇಲಾಖೆ ಹಾಗೂ ನ್ಯಾನೋ ತಂತ್ರಜ್ಞಾನದ ದಾರ್ಶನಿಕರ ತಂಡ ಇಂದು ನಗರದಲ್ಲಿ ಆಯೋಜಿಸಿದ್ದ 'ಬೆಂಗಳೂರು ನ್ಯಾನೋ-2008' ಉದ್ಘಾಟಿಸಿ ಮಾತನಾಡಿದರು.

ಸಾರ್ವಜನಿಕರ ಹಣದಿಂದ ನಡೆಸುವ ವೈಜ್ಞಾನಿಕ ಹಾಗೂ ತಾಂತ್ರಿಕ ಕ್ಷೇತ್ರದ ಸಂಶೋಧನೆ ಮತ್ತು ಪ್ರಗತಿ ಶ್ರೀಸಾಮಾನ್ಯ ಗ್ರಹಿಕೆಗೆ ನಿಲುಕದಷ್ಟು ದೂರದಲ್ಲಿಯೇ ಉಳಿದಿದೆ. ಈ ಕ್ಷೇತ್ರದ ಸಂಶೋಧನೆಗಳ ಹಾದಿಯು ಸಾರ್ವಜನಿಕರ ಚರ್ಚೆ ಹಾಗೂ ಪಾಲ್ಗೊಳ್ಳುವಿಕೆಯಿಂದಲೇ ಮೂಡಿಬರಬೇಕಿದೆ. ಇಂಡಿಯಾದ ಜನ ಸಮೂಹವನ್ನು ದೃಷ್ಟಿಯಲ್ಲಿಟ್ಟುಕೊಂಡೇ ಬೆಳೆಸಬೇಕಿರುವುದು ಇಂದಿನ ಸವಾಲಾಗಿದೆ ಎಂದರು.

ಜಾಗತಿಕವಾಗಿ ನ್ಯಾನೋ ತಂತ್ರಜ್ಞಾನವು ಅಭಿವೃದ್ಧಿಹೊಂದಿದ ರಾಷ್ಟ್ರಗಳ ಅನಭೋಗೀಯ ವಸ್ತುಗಳ ತಯಾರಿಕೆಗೆ ಸೀಮಿತವಾಗಿದೆ. ಅಭಿವೃದ್ಧಿಶೀಲ ರಾಷ್ಟ್ರಗಳ ಆದ್ಯತೆ ಬೇರೆಯೇ ಆಗಬೇಕಿದೆ. ನಮ್ಮ ದೇಶದ ಬಹುಸಂಖ್ಯಾತರು ಕೃಷಿ ಅವಲಂಬಿಸಿದ್ದು, ಕೃಷಿ ಕ್ಷೇತ್ರದ ದಕ್ಷತೆ, ಉತ್ಪಾದನೆ ಹೆಚ್ಚಿಸಲು ನ್ಯಾನೋ ಸಹಕಾರಿ. ...5ನೇ ಪುಟಕ್ಕೆ

## 'ನ್ಯಾನೋನಗರಿ' ಬೆಂಗಳೂರು

ಮಾಹಿತಿ ತಂತ್ರಜ್ಞಾನ ಕ್ಷೇತ್ರದ ರಾಜಧಾನಿಯೆಂದೇ ವಿಶ್ವವಿಖ್ಯಾತಿ ಪಡೆದಿರುವ ಬೆಂಗಳೂರು ಇದೀಗ 'ನ್ಯಾನೋ ನಗರಿ' ಎಂದು ಘೋಷಿಸಲ್ಪಟ್ಟಿದೆ. ನ್ಯಾನೋ ತಂತ್ರಜ್ಞಾನದ ದಾರ್ಶನಿಕರ ತಂಡ ಸಿದ್ಧಪಡಿಸಿದ್ದ ಬೆಂಗಳೂರು ನ್ಯಾನೋ ಘೋಷಣೆ ಇದನ್ನು ವಿವರಿಸಿದೆ. ಬೆಂಗಳೂರು, ಕೊಲ್ಕತ್ತ, ಮೊಹಾಲಿಯನ್ನು ನ್ಯಾನೋ ತಂತ್ರಜ್ಞಾನ ಅಭಿವೃದ್ಧಿ ಕೇಂದ್ರವೆಂದು ಗುರುತಿಸಿದೆ. ನ್ಯಾನೋ ಸಂಶೋಧನೆ ಅಭಿವೃದ್ಧಿಯಲ್ಲಿ ಬೆಂಗಳೂರು ಪ್ರಧಾನ ಪಾತ್ರ ವಹಿಸಲಿದ್ದು, ಸಣ್ಣ, ಮಧ್ಯಮ, ಬೃಹತ್ ನ್ಯಾನೋ ಉದ್ಯಮಗಳಿಗೆ ಬೆಂಗಳೂರು ಕೇಂದ್ರವಾಗಬೇಕೆಂದು, ಇದಕ್ಕೆ ಬೇಕಾದ ಎಲ್ಲಾ ಸಹಕಾರವನ್ನು ದಾರ್ಶನಿಕರ ತಂಡ ನೀಡಲಿದೆ.



ಬೆಂಗಳೂರಿನಲ್ಲಿ ಶನಿವಾರ 'ಬೆಂಗಳೂರು ನ್ಯಾನೋ ಮೇಳ'ದಲ್ಲಿ ಉಪ ರಾಷ್ಟ್ರಪತಿ ಎಂ. ಹಮಿದ್ ಅನ್ಸಾರಿ ಅವರು ಪ್ರೊ। ದೀಪಂಕಾರ್ ಚಕ್ರವರ್ತಿ ಅವರಿಗೆ ಪ್ರಶಸ್ತಿ ವಿತರಿಸಿದರು. ರಾಜ್ಯಪಾಲ ರಾಮೇಶ್ವರ ಠಾಕೂರ್, ಗೃಹ ಸಚಿವ ಡಾ। ವಿ.ಎಸ್.ಆಚಾರ್ಯ, ಪ್ರೊ। ಸಿಎನ್ಆರ್ ರಾವ್ ಮತ್ತಿತರರು ಉಪಸ್ಥಿತರಿದ್ದರು.

# ಶ್ರೀಸಾಮಾನ್ಯನ ಕಲ್ಯಾಣಕ್ಕೆ ನ್ಯಾನೋ

(ಒಂದನೇ ಪುಟದಿಂದ)

ಶುದ್ಧ ಕುಡಿಯುವ ನೀರು, ಆರೋಗ್ಯ ಸೇವೆ, ಶುದ್ಧ ಇಂಧನ, ಕಡಿಮೆ ವೆಚ್ಚದ ಗೃಹ ನಿರ್ಮಾಣಕ್ಕೆ ಸಹಾಯ ಮಾಡಲಿದೆಯೇ ಎಂಬ ಪ್ರಶ್ನೆ ಕೇಳಿಕೊಳ್ಳಬೇಕಾಗಿದೆ ಎಂದು ಅನ್ಸಾರಿ ಎಚ್ಚರಿಸಿದರು.

**ನೀತಿ ಸಂಹಿತೆ:** ನ್ಯಾನೋ ಕ್ಷೇತ್ರವು ಸ್ವಯಂ ನೀತಿ ಸಂಹಿತೆ ಅಳವಡಿಸಿಕೊಂಡರೆ ಸಾಮಾನ್ಯರ ಆಶಯಗಳ ಈಡೇರಿಸಲು ಸಹಕಾರಿಯಾಗುತ್ತದೆ ಪ್ರಾಧಿಕಾರ ಸ್ಥಾಪಿಸಿ ಏಕಗವಾಕ್ಷಿ ಪದ್ಧತಿ ಜಾರಿಗೆ ತರಲಾಗಿದೆ. ಗ್ರಾಮೀಣ ಭಾಗಕ್ಕೆ ಐಟಿ ವಿಸ್ತರಿಸಲು ಯೋಜನೆ ರೂಪಿಸಲಾಗಿದೆ ಎಂದು ವಿವರಿಸಿದರು.

ನ್ಯಾನೋ ಪ್ರವರ್ತಕ ವಿಜ್ಞಾನಿ, ಪ್ರಧಾನ ಮಂತ್ರಿಗಳ ವೈಜ್ಞಾನಿಕ ಸಲಹೆಗಾರ ಪ್ರೊ। ಸಿ.ಎನ್.ಆರ್. ರಾವ್ ಮಾತನಾಡಿ, ಬೆಂಗಳೂರು ಹೊರವಲಯದಲ್ಲಿ ಇನ್ಸ್ಟಿಟ್ಯೂಟ್ ಆಫ್

14th Dec '08 Pg - 1 & 5 / Udaya Vani